ವಸುಧೇಂದ್ರ

# ಕಾಮನಬಿಲ್ಲಿನ ಕತೆಗಳು

ಮಂಜುನಾಯಕ ಚಳ್ಳೂರು ಅವರ 'ಫೂ...' ಕತೆಯನ್ನು 'ಸುಧಾ' ಯುಗಾದಿ ವಿಶೇಷಾಂಕದಲ್ಲಿ ಓದಿ ಮೆಚ್ಚಿಕೊಂಡಿದ್ದೆ. ವಸ್ತು ಹಳೆಯದೆನ್ನಿಸಿದ್ದರೂ ಬಳಸಿದ ತಂತ್ರ, ತುಂಗಭದ್ರಾ ಸೀಮೆಯ ನುಡಿಗಟ್ಟು, ಪೂರ್ವಗ್ರಹವಿಲ್ಲದ ಮನೋಭಾವ, ಸ್ಪಷ್ಟ ಪಾತ್ರಚಿತ್ರಣ – ಎಲ್ಲವೂ ಸಮರ್ಪಕವಾಗಿದ್ದವು. ಈ ಕತೆಗಾರರ ಬೇರೆ ಕತೆಯನ್ನು ಎಲ್ಲಿಯೂ ಓದಿರಲಿಲ್ಲ. ಆದರೆ ಚಕ್ಕನೆ ಅವರ ಕಥಾಸಂಕಲನವೇ ಅಂಗಡಿಯಲ್ಲಿ ಕಂಡಾಗ 'ಅರೆರೆ...' ಎಂದು ಸಂಭ್ರಮದಿಂದ ಖರೀದಿಸಿದೆ. ಏಳು ಕತೆಗಳ ಬಹು ಪುಟ್ಟ ಪುಸ್ತಕವಿದು. ಆದರೆ ಹೊಸ ಧ್ವನಿಯನ್ನು ಕೇಳಿದ ಭಾವ ಈ ಪುಟ್ಟ ಪುಸ್ತಕ ಓದಿ ಮುಗಿಸುವುದರಲ್ಲಿ ನನಗಾಗಿತ್ತು. ಅವರ 'ಫೂ...' ಕತೆಯಲ್ಲಿ ಒಂದು ಸೊಗಸಾದ ಚಿತ್ರಣವಿದೆ. ಬೊಗಸೆಯಷ್ಟು ನೀರನ್ನು ಬಾಯಲ್ಲಿಟ್ಟುಕೊಂಡು ಅದನ್ನು ಆಗಸಕ್ಕೆ 'ಫೂ...' ಎಂದು ಉಗಿದರೆ, ಬಿಸಿಲಿನ ಝಳಕ್ಕೆ ಅದರಲ್ಲಿ ಕಾಮನಬಿಲ್ಲು ಮೂಡುತ್ತಿರುತ್ತದೆ. 'ಅವಳ ಬಾಯಲ್ಲಿ ಕಾಮನಬಿಲ್ಲು ಇತ್ತು' ಎಂದು ಲೇಖಕರು ಅದನ್ನು ವರ್ಣಮಯವಾಗಿ ಹೇಳುತ್ತಾರೆ. ಕಾಮನಬಿಲ್ಲಿನ ಏಳು ಬಗೆಯ ವಿಭಿನ್ನ ಬಣ್ಣಗಳನ್ನು ಈ ಕಥಾಸಂಕಲನದ ಏಳೂ ಕತೆಗಳಲ್ಲೂ ಕಾಣಬಹುದಾಗಿದೆ.

ತುಂಗಾಭದ್ರಾ ನದಿಯ ನೀರು ಕುಡಿದ ಕನ್ನಡದ ಹಲವು ಕತೆಗಾರರು ತಮ್ಮದೇ ರೀತಿಯಲ್ಲಿ ಅಲ್ಲಿಯ ಬದುಕನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಸೀಮೆ ಒಂದೇ ಆದರೂ, ಅವರು ಕಟ್ಟಿಕೊಟ್ಟ ಜಗತ್ತುಗಳು ಬೇರೆ ಬೇರೆಯೇ ಆಗಿವೆ. ಬೀಚಿ, ಕುಂವೀ, ಕೇಶವ ಮಳಗಿ, ಅಮರೇಶ ನುಗಡೋಣಿ, ರವಿ ಬೆಳಗೆರೆ – ಎಲ್ಲರೂ ಆ ಸೀಮೆಯ ಬದುಕನ್ನು ತಮ್ಮದೇ ಭಾಷೆ ಮತ್ತು ದೃಷ್ಟಿಕೋನದಲ್ಲಿ ಚಿತ್ರಿಸಿದ್ದಾರೆ. ಮಳೆಬಿಲ್ಲಿನ ಬಣ್ಣಗಳಂತೆ ಅವೆಲ್ಲವೂ ವಿಭಿನ್ನವಾಗಿಯೇ ಇವೆ. ಅದಕ್ಕೆ ಮತ್ತೊಂದು ಬಣ್ಣವಾಗಿ ಚಳ್ಳೂರರ ಕತೆಗಳು ಸೇರಿಕೊಳ್ಳುತ್ತವೆ.

ಗಂಗಾವತಿ ಭಾಗದ ಜನರ ಭಾಷೆ, ಬದುಕು, ಬವಣೆಗಳು ಈ ಕತೆಗಳಲ್ಲಿ ವಿಶೇಷವಾಗಿ ಚಿತ್ರಣಗೊಂಡಿವೆ. ಅವೇ ಈ ಕತೆಗಳ ವೈಶಿಷ್ಟ್ಯ. ಅತ್ಯಂತ ಪ್ರೀತಿಯಿಂದ, ಮುತುವರ್ಜಿಯಿಂದ, ಯಾವುದೇ ಹಿಂಜರಿಕೆಯಿಲ್ಲದೆ ಅಲ್ಲಿಯ ಜನರ ಭಾಷೆಯ ಉಚ್ಚಾರಣೆಯನ್ನು ಈ ಏಳೂ ಕತೆಗಳು ಹಿಡಿದಿಟ್ಟಿವೆ. ಒಂದು ವೇಳೆ ಕನ್ನಡದ ಸ್ಪೆಲ್ ಚೆಕ್ ತಂತ್ರಜ್ಞಾನ ಅಭಿವೃದ್ಧಿಯಾಗಿ, ಅದಕ್ಕೆ ಈ ಕತೆಗಳ ಪಾತ್ರಗಳು ಆಡುವ ಮಾತನ್ನು ಪರಿಶೀಲಿಸಲು ಕೊಟ್ಟರೆ ಎಲ್ಲ ಪದಗಳೂ ತಪ್ಪೆಂದು ಹೇಳುವ ಸಂಭವವಿದೆ! ನಾವು ಬಳಸುವ ಆಡುನುಡಿಯು ಗ್ರಾಂಥಿಕ ಭಾಷೆಗಿಂತಲೂ ಅದೆಷ್ಟು ವಿಭಿನ್ನವಾಗಿದೆ ಎಂಬುದಕ್ಕೆ ಅದು ಸಾಕ್ಷಿ.

ಕತೆಯ ಪರಿಧಿಯನ್ನು ಬಲವಂತವಾಗಿ ಎಳೆದು ವೃತ್ತವಾಗಿಸುವ ಹಟ ಈ ಕತೆಗಾರನಿಗಿಲ್ಲ. ಸುಮ್ಮನೆ ಆ ಭಾಗದ ವಿಶಿಷ್ಟ ವ್ಯಕ್ತಿಗಳ ಚಿತ್ರಣವನ್ನೋ, ಆಚರಣೆಗಳ ಅನುಭವವನ್ನೋ ನೀಡಿ